**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎ.ವಸಂತಕುಮಾರ್ ಇವರು ನಿಯಮ-72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.**

**ಪ್ರಶ್ನೆ:**

ರಾಜ್ಯದ ಸಾಂಸ್ಕೃತಿಕ ಇತಿಹಾಸದಲ್ಲಿ ಅಪ್ರತಿಮ ಸ್ಥಾನ ಹೊಂದಿರುವ ಕನ್ನಡದ ಆದಿಕವಿ ಪಂಪರು. ಜಾತಿಪದ್ಧತಿಗೆ ಪ್ರತಿರೋಧ ವ್ಯಕ್ತಪಡಿಸಿದ ಮಹಾನ್ ಸಾಹಿತ್ಯ ಸೃಷ್ಟಿಕರ್ತರು. ಇಂತಹ ಶ್ರೇಷ್ಠ ಕವಿಗೆ ತಕ್ಕ ಗೌರವ ಮತ್ತು ಮಾನ್ಯತೆ ನೀಡುವ ವಿಷಯದಲ್ಲಿ ಸರ್ಕಾರದಿಂದ ನಿರ್ಲಕ್ಷ್ಯವಾಗುತ್ತಿರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ.

ರಾಜ್ಯದಲ್ಲಿ ಅನೇಕ ಸಾಂಸ್ಕೃತಿಕ ಸಾಧಕರ ಹೆಸರಿನಲ್ಲಿ ಪ್ರತಿಷ್ಠಾನಗಳು ಮತ್ತು ಪ್ರಾಧಿಕಾರಗಳು ಸ್ಥಾಪನೆಯಾಗಿರುವ ಹಿನ್ನೆಲೆ, ಪಂಪ ಮಹಾಕವಿಯ ಹೆಸರಿನಲ್ಲಿ ಇಂತಹ ಯಾವುದೇ ಸಂಸ್ಥೆ ಇಲ್ಲದಿರುವುದು ಗಂಭೀರ ಪ್ರಶ್ನೆಗೆ ಕಾರಣವಾಗಿದೆ. ಇದು ಕನ್ನಡದ ಆದಿಕವಿಗೆ ಸಲ್ಲಬೇಕಾದ ಗೌರವವನ್ನು ನಿರ್ಲಕ್ಷಿಸುವಂತಾಗಿದೆ.

ಆದ್ದರಿಂದ ಸರ್ಕಾರವು ಈ ವಿಷಯವನ್ನು ತುರ್ತಾಗಿ ಪರಿಗಣಿಸಿ ಕನ್ನಡದ ಆದಿಕವಿ ಪಂಪರ ಹೆಸರಿನಲ್ಲಿ ಪ್ರಾಧಿಕಾರ ಅಥವಾ ಪ್ರತಿಷ್ಠಾನವನ್ನು ಸ್ಥಾಪಿಸುವ ಕುರಿತು ಸ್ಪಷ್ಟ ಹಾಗೂ ತಕ್ಷಣದ ನಿರ್ಧಾರ ಕೈಗೊಳ್ಳಬೇಕೆಂದು ಈ ಸದನದ ಮೂಲಕ ಮಾನ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ:**

ಕನ್ನಡದ ಆದಿಕವಿ ಎಂದೇ ಪ್ರಸಿದ್ಧರಾದ, ಪಂಪನು ಗದಗ ಜಿಲ್ಲೆಯ ಅಣ್ಣಿಗೇರಿಯಲ್ಲಿ ಜನಿಸಿದರು. ಇವರ ತಂದೆ ಭೀಮಪ್ಪಯ್ಯ ಮತ್ತು ತಾಯಿ ಅಬ್ಬಲಬ್ಬೆ. ಚಾಲುಕ್ಯ ವಂಶದ ಅರಸ ಇಮ್ಮಡಿ ಅರಿಕೇಸರಿಯ ಆಸ್ಥಾನದ ಕವಿಯಾಗಿದ್ದರು. ಪಂಪನು, ಆದಿಪುರಾಣ ಎಂಬ ಧಾರ್ಮಿಕ ಕಾವ್ಯವನ್ನು ಹಾಗೂ ವಿಕ್ರಮಾರ್ಜುನ ವಿಜಯ ಎಂಬ ಲೌಕಿಕ ಕಾವ್ಯವನ್ನು "ಚಂಪೂ" ಶೈಲಿಯಲ್ಲಿ ರಚಿಸಿದ್ದಾನೆ. ಕನ್ನಡದ ರತ್ನತ್ರಯರಲ್ಲಿ ಒಬ್ಬರಾದ ಪಂಪನು ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಪರಂಪರೆಯನ್ನು ಹಾಕಿಕೊಟ್ಟಿದ್ದರಿಂದ ಯುಗ ಪ್ರವರ್ತಕನೆಂದು ಕನ್ನಡಿಗರು ಗೌರವಿಸಿ ಅವರ ಕಾಲವನ್ನು 'ಪಂಪಯುಗ' ವೆಂದು ಕರೆದಿದ್ದಾರೆ. "ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ" ಇವೆರಡೂ ಪಂಪನ ಎರಡು ಮೇರು ಕೃತಿಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಈಗಾಗಲೇ 25 ಟ್ರಸ್ಟ್/ಪ್ರತಿಷ್ಠಾನಗಳು ಕಾರ್ಯನಿರ್ವಹಿಸುತ್ತಿದ್ದು, ಹೊಸದಾಗಿ 6 ಟ್ರಸ್ಟ್/ಪ್ರತಿಷ್ಠಾನಗಳನ್ನು ರಚನೆ ಮಾಡಿ ಆದೇಶಿಸಲಾಗಿದ್ದು, ಒಟ್ಟಾರೆ 31 ಟ್ರಸ್ಟ್/ಪ್ರತಿಷ್ಠಾನಗಳಿರುತ್ತವೆ.

ಆದಿಕವಿ ಪಂಪನ ಹೆಸರಿನಲ್ಲಿ ಪ್ರತಿಷ್ಠಾನ ರಚಿಸುವುದಕ್ಕೆ ಸಂಬಂಧಿಸಿದ ಪ್ರಸ್ತಾವನೆಯು ಸ್ವೀಕೃತವಾಗಿದ್ದು, "ಆದಿಕವಿ ಪಂಪ ಪ್ರತಿಷ್ಠಾನ"ವನ್ನು ರಚಿಸಲು ಅನುಮೋದನೆ ನೀಡಲಾಗಿದೆ. ಮುಂದುವರೆದು, ಸದರಿ ಪ್ರತಿಷ್ಠಾನಕ್ಕೆ 2026-27ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಸೂಕ್ತ ಅನುದಾನ ಒದಗಿಸಲಾಗುವುದು.

ಸಂಖ್ಯೆ: ಕಸಂಮಾ 55 ಕವಿಸ 2026

(ಶಿವರಾಜ್ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು